ಸೇರಿದವನು; ಸಂಕೋಚಪಡದೆ ಊಟ ಮಾಡಲಿ ಎಂದು. ನನ್ನ ಊಟ ಮುಗಿದ ನಂತರ, ತಾವು ಹೊರಡುವ ಮುಂಚೆ, ನನ್ನ ಬಗ್ಗೆ ಪಕ್ಕದಲ್ಲಿ ಕುಳಿತಿದ್ದ ಒಬ್ಬ ಸಂನ್ಯಾಸಿಗೆ ಹೀಗೆ ಹೇಳಿದರು: 'ಅವನ ಕಡೆ ಸ್ವಲ್ಪ ಗಮನವಿರಲಿ. ಹೊಸದಾಗಿ ಸೇರಿಕೊಂಡಿದ್ದಾನೆ. ಸಂಕೋಚ ಪಟ್ಟು ಅರ್ಧಹೊಟ್ಟೆ ಊಟಮಾಡದಂತೆ ನೋಡಿಕೋ.' "

ರಾಜ್‌ಕೋಟ್ ಆಶ್ರಮದಿಂದ ಸ್ವಾಮಿ ಭೂತೇಶಾನಂದರು ಬೇಲೂರು ಮಠಕ್ಕೆ ತೆರಳಿದಾಗ, ಅವರ ಸ್ಥಾನಕ್ಕೆ ಸ್ವಾಮಿ ಆತ್ಮಸ್ಥಾನಂದಜಿಯವರನ್ನು ನಿಯುಕ್ತಿ ಮಾಡಲಾಯಿತು. ಸ್ವಾಮಿ ಆತ್ಮಸ್ಥಾನಂದಜಿ ತಮ್ಮ ನೆನಪುಗಳಲ್ಲಿ ಹೀಗೆ ಬರೆಯುತ್ತಾರೆ: "ರಾಜ್‌ಕೋಟ್‌ಗೆ ಹೊಸದಾಗಿ ಹೋದ ನನ್ನನ್ನು ಸ್ವಾಮೀಜಿ ಹಲವಾರು ಜನರಿಗೆ ಪರಿಚಯ ಮಾಡಿಕೊಟ್ಟರು ಹಾಗೂ ಬೇರೆ ಬೇರೆ ಸ್ಥಳಗಳಿಗೆ ಕರೆದುಕೊಂಡು ಹೋದರು. ಆಗೆಲ್ಲಾ ನಾವು ಪ್ರಯಾಣ ಮಾಡಿದ್ದು, ಸಾಧಾರಣ ಬಸ್ಸಿನಲ್ಲಿ ಅಥವಾ ಮೂರನೆಯ ದರ್ಜೆಗೆ ಸೇರಿದ ರೈಲುಗಾಡಿಯಲ್ಲಿ. ಹೋದಲ್ಲೆಲ್ಲಾ ಆಶ್ರಮಗಳು ಇರುತ್ತಿರಲಿಲ್ಲ. ಆಗ ಭಕ್ತರ ಮನೆಗಳಲ್ಲಿಯೇ ತಂಗುತ್ತಿದ್ದೆವು. ನೆಲದ ಮೇಲೆ ಹೊದಿಕೆಯ ಮೇಲೆಯೇ ಮಲಗುತ್ತಿದ್ದೆವು. ಈ ಸಂದರ್ಭಗಳಲ್ಲಿ ಸ್ವಾಮಿ ಭೂತೇಶಾನಂದಜಿ ಅವರು ಸಹಜವಾಗಿ ಸಾಮಾನ್ಯರಂತೆ ನಡೆದುಕೊಳ್ಳುತ್ತಿದ್ದರು. ಒಬ್ಬ ಮಹಾನ್ ವಿದ್ವಾಂಸರ ಜೊತೆಗೆ, ಅದೂ ರಾಮಕೃಷ್ಣ ಮಹಾಸಂಘದ ಒಬ್ಬ ಹಿರಿಯ ಟ್ರಸ್ಟಿಯ ಜೊತೆಗೆ ಪ್ರಯಾಣ ಮಾಡುತ್ತಿದ್ದೇನೆ ಎಂಬ ಭಾವನೆ ನನಗೆ ಆಗ ಒಮ್ಮೆಯೂ ಬರಲಿಲ್ಲ."

ಸ್ವಾಮಿ ಭೂತೇಶಾನಂದಜಿಯವರು ಬೇಲೂರು ಮಠದಲ್ಲಿ ೧೯೬೬ ರಿಂದ ೧೯೭೭ ರವರೆಗೆ ಸಂಘದ ಸಹಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಪರಿಹಾರ ಕಾರ್ಯಗಳ ಜವಾಬ್ದಾರಿಯ ಜೊತೆಗೆ, ಬ್ರಹ್ಮಚಾರಿಗಳ ಪ್ರಶಿಕ್ಷಣ ಕೇಂದ್ರದ ಆಚಾರ್ಯರೂ ಆಗಿದ್ದರು. ಅಲ್ಲದೆ ಪ್ರತಿ ಭಾನುವಾರ, ಭಕ್ತರಿಗೆ 'ಶ್ರೀರಾಮಕೃಷ್ಣ ವಚನವೇದ' ದ ಮೇಲೆ ಉಪನ್ಯಾಸಗಳನ್ನು ನೀಡುತ್ತಿದ್ದರು. ಈ ಎಲ್ಲ ಕೆಲಸಕಾರ್ಯಗಳ ಭಾರವಿದ್ದರೂ, ತಮ್ಮ ವೈಯಕ್ತಿಕ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದರು. ಟೀ ಪಾತ್ರೆಯನ್ನು ತೊಳೆಯುವುದು, ಬಟ್ಟೆ ಒಗೆದು ಬಿಸಿಲಿಗೆ ಒಣಗಲು ಹಾಕುವುದು, ಬಚ್ಚಲು ಮನೆ ಮತ್ತು ಶೌಚಾಲಯಗಳನ್ನು ಶುದ್ಧವಾಗಿ ಇಟ್ಟುಕೊಳ್ಳುವುದು – ಇವೇ ಮುಂತಾದ ಕೆಲಸಗಳನ್ನು ಅವರು ತಾವೇ ಮಾಡಿಕೊಳ್ಳುತ್ತಿದ್ದರು. ತಮ್ಮ ಸಲುವಾಗಿ ಸಂಘದ ಹಣವನ್ನು ಖರ್ಚು ಮಾಡುವುದಕ್ಕೆ ಅವರು ತುಂಬ ಹಿಂಜರಿಯುತ್ತಿದ್ದರು. ತಮ್ಮಿಂದ ಬೇರೆಯವರಿಗೆ ಅನಾನುಕೂಲ ಆಗಬಾರದು ಎಂದು ಎಚ್ಚರಿಕೆ ವಹಿಸುತ್ತಿದ್ದರು.

ವೈದ್ಯರು ಸ್ವಾಮೀಜಿಯವರ ಆಹಾರದ ಬಗ್ಗೆ ಅನೇಕ ಕಟ್ಟುಪಾಡುಗಳನ್ನು ವಿಧಿಸಿದ್ದರು. ಭಕ್ತರು ಅವರಿಗಾಗಿ ಆಹಾರ ಪದಾರ್ಥಗಳನ್ನು ತಂದಾಗ, ಸ್ವಾಮೀಜಿ ಅವರಿಗೆ ಹೀಗೆ ಹೇಳುತ್ತಿದ್ದರು: "ನೋಡಿ, ವೈದ್ಯರು ಆಹಾರದ ವಿಷಯದಲ್ಲಿ ಕೆಲವು ನಿಯಮಗಳನ್ನು ಹೇಳಿದ್ದಾರೆ. ಸೇವಕ ಸ್ವಾಮಿಗಳು ನನಗೆ ಏನು ಕೊಡುತ್ತಾರೋ, ಅದನ್ನು ನಾನು ತಿನ್ನುತ್ತೇನೆ." ಇದು ಕೇಳಿದವರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತಿತ್ತು. ಸತ್ಯವನ್ನು ಹೇಳಿದರೂ ಪರಿಣಾಮಕಾರಿಯಾಗಿ ಹೇಳುವ ದೊಡ್ಡ ಗುಣ ಸ್ವಾಮೀಜಿಯವರದಾಗಿತ್ತು.

ಸ್ವಾಮಿ ಭೂತೇಶಾನಂದಜಿಯವರ ಉದಾತ್ತ ಗುಣಗಳನ್ನು ವಿವರಿಸುವಾಗ, ಅವರಲ್ಲಿದ್ದ ಹಾಸ್ಯ ಸ್ವಭಾವವನ್ನು ಉಲ್ಲೇಖಿಸದಿದ್ದರೆ ಈ ವಿವರಣೆ ಅಸಂಪೂರ್ಣವಾಗುತ್ತದೆ. ಬಂಗಾಳಿ ಭಾಷೆಯಲ್ಲಿ ಇತ್ತೀಚೆಗೆ, ಅವರಿಗೆ ಸಂಬಂಧಪಟ್ಟ ಹಾಸ್ಯಪ್ರಸಂಗಗಳ ಒಂದು ಪುಸ್ತಕ ಪ್ರಕಟವಾಗಿದೆ. ಅದರ ಹೆಸರು, 'ರಸಬೋಧ' ಎಂದು. ಈ ಪುಸ್ತಕದಿಂದ ಆಯ್ದ ಒಂದು ಪ್ರಸಂಗವನ್ನು ನೋಡೋಣ:

ಸ್ವಾಮಿ ಭೂತೇಶಾನಂದಜಿ ಅವರು ಸಾಮಾನ್ಯವಾಗಿ ಸುಲಭವಾಗಿ ಜೀರ್ಣವಾಗುವ ಆಹಾರವನ್ನು ತೆಗೆದುಕೊಳ್ಳುತ್ತಿದ್ದರು. ಒಮ್ಮೆ ಒಬ್ಬ ಗುಜರಾತಿ ಭಕ್ತರು, ಬಹಳ ಒತ್ತಾಯ ಮಾಡಿ, ಎಲೆ–ಅಡಿಕೆ ತಿನ್ನಿಸಿದ್ದರು. ಅನಂತರ ಯಾರೋ ಅವರನ್ನು, "ಎಲೆ–ಅಡಿಕೆ ತಿಂದುದು ನಿಮಗೆ ಹೇಗೆ ಅನ್ನಿಸಿತು?" ಎಂದು ಕೇಳಿದರು. ಅದಕ್ಕೆ ಸ್ವಾಮೀಜಿ ಹೀಗೆ ಉತ್ತರಿಸಿದರು: "ನಾನು ಒಂದು 'ಆಡು' ಎಂಬಂತೆ ನನಗೆ ಅನ್ನಿಸುತ್ತಿತ್ತು." ಇದನ್ನು ಕೇಳಿ ಎಲ್ಲರೂ ನಕ್ಕರೇನೋ ಸರಿ, ಆದರೆ ಅಂಥ ಹಾಸ್ಯಮಯ ಮಾತಿನಲ್ಲಿಯೂ ಒಂದು ನೀತಿಯೂ ಇರುತ್ತಿತ್ತು.

ಒಬ್ಬ ಭಕ್ತ ಮಹಿಳೆ ಬೇಲೂರು ಮಠದಲ್ಲಿ ಸ್ವಾಮೀಜಿಯರ ಪರಿಚಯ ಮಾಡಿಕೊಂಡಿದ್ದರು. ಅನಂತರ ಆಕೆ, ಸ್ವಾಮೀಜಿ ದೆಹಲಿಗೆ ಹೋದಾಗ, ಅವರನ್ನು ನೋಡಲು ತಮ್ಮ ಸೊಸೆಯೊಡನೆ ಬಂದಿದ್ದರು. ಸ್ವಾಮೀಜಿಗೆ ಪ್ರಣಾಮ ಮಾಡುತ್ತಾ, ಆಕೆ ತನ್ನ ಸೊಸೆಯ ಬಗ್ಗೆ, "ಮಹಾರಾಜ್, ಇವಳು ಸಭ್ಯತೆಯ ಪ್ರತೀಕ" ಎಂದು ಹೊಗಳಿದರು. ಅದಕ್ಕೆ ಹಸನ್ಮುಖರಾಗಿ ಸ್ವಾಮಿ ಭೂತೇಶಾನಂದಜಿ ಹೀಗೆ ಹೇಳಿದರು: "ಹೌದು, ನೀನು ಸಭ್ಯಳಾಗಿದ್ದರೆ ನಿನ್ನ ಸೊಸೆಯೂ ಸಭ್ಯಳಾಗಿಯೇ ಇರುತ್ತಾಳೆ."

ಇಲ್ಲಿ ಗಮನಿಸಬೇಕಾದ ಒಂದು ವಿಷಯವೆಂದರೆ, ಸರ್ವಸಂಗ ಪರಿತ್ಯಾಗಿಗಳಾದ ಒಬ್ಬ ಸಂನ್ಯಾಸಿಗಳು, ಒಂದೇ ಮಾತಿನಲ್ಲಿ, ಸಂಸಾರಜೀವನದಲ್ಲಿ ಶಾಂತಿಯನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬ ಒಂದು ಮಹಾಮಂತ್ರವನ್ನೇ ನೀಡಿದರೆಂಬುದು. ಇದು ಆ ಮಹಿಳೆಗೆ ಮಾತ್ರವೇ ಅನ್ವಯಿಸುವುದಿಲ್ಲ. ಇತರರೂ ಅದರಿಂದ ಕಲಿತುಕೊಳ್ಳಬೇಕು. ಇದನ್ನೇ ಶ್ರೀಮಾತೆಯವರು ಹೀಗೆ ಹೇಳಿದ್ದಾರೆ: "ಮಗು, ನಿನಗೇನಾದರೂ ಶಾಂತಿ ಬೇಕಿದ್ದಲ್ಲಿ, ಯಾರಲ್ಲೂ ದೋಷವನ್ನು ನೋಡಬೇಡ."

ಸ್ವಾಮಿ ಭೂತೇಶಾನಂದಜಿ ಅವರ ಜೀವನ ಆದರ್ಶಮಯವಾದುದು. ಅವರಲ್ಲಿ ಕಾಣಬರುವ ಸದ್ಗುಣಗಳನ್ನು ಸ್ವಲ್ಪವಾದರೂ ನಾವು ಆಚರಣೆಗೆ ತಂದರೆ, ನಮ್ಮ ಜೀವನವೂ ಸಾರ್ಥಕವಾಗುತ್ತದೆ. (ಮುಂದುವರಿಯುವುದು)

ವಿವೇಕಪ್ರಭದ ಎಲ್ಲಾ ಸಂಚಿಕೆಗಳನ್ನೂ ಇಂಟರ್‌ನೆಟ್‌ನಲ್ಲಿ ನೀವು ಓದಬಹುದು. ಅದಲ್ಲದೆ, ಲೇಖಕರು, ಶೀರ್ಷಿಕೆ, ವರ್ಷ ಮತ್ತು ತಿಂಗಳುಗಳ ಆಧಾರದ ಮೇಲೆ ನಿಮಗೆ ಬೇಕಾದ ಲೇಖನವನ್ನು ಹುಡುಕಬಹುದು. ಅದಕ್ಕಾಗಿ ಈ ವೆಬ್‌ಸೈಟ್ ಅನ್ನು ದಯವಿಟ್ಟು ಸಂದರ್ಶಿಸಿ: vivekaprabha.net

ವಿವೇಕಪ್ರಭ ಪತ್ರಿಕೆಯ ಚಂದಾದಾರಿಕೆಯ ಸಂಬಂಧದ ಎಲ್ಲ ವಿಚಾರಣೆಗಳಿಗಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆಮಾಡಿ: 9481533505 (ಕೆ.ಪಿ. ವೇಣುಗೋಪಾಲ್)

# 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯಿಂದ




**ಬ**ಲ, ಧೈರ್ಯ, ಶಕ್ತಿ ಎನ್ನುವುದೆಲ್ಲ ವಿಚಿತ್ರವಾಗಿ ತೋರುವುದು. ಸಾಧಾರಣವಾಗಿ ಧೈರ್ಯಶಾಲಿ, ಬಲಶಾಲಿ, ಸಾಹಸಿ ಎನ್ನುವೆವು. ಆದರೆ ಆ ಧೈರ್ಯ ಬಲ ಸಾಹಸ ಅಥವಾ ಇನ್ನು ಯಾವುದಾದರೂ ಗುಣವೇ ಆಗಲಿ, ಆ ಮನುಷ್ಯನ ಮುಖ್ಯ ಲಕ್ಷಣವಾಗಿರುವುದಿಲ್ಲ. ಗುಂಡಿನ ಬಾಯಿಗೆ ಧೈರ್ಯದಿಂದ ಧಾವಿಸುವ ಮನುಷ್ಯ, ಶಸ್ತ್ರಚಿಕಿತ್ಸಕನ ಕೈಯಲ್ಲಿರುವ ಚಾಕುವಿಗೆ ಅಂಜುವನು. ಮತ್ತೊಬ್ಬ, ಎಂದಿಗೂ ಕೋವಿಯ ಬಾಯಿಗೆ ಎದೆಯೊಡ್ಡಲು ಧೈರ್ಯವಿಲ್ಲದವನು, ಅವಶ್ಯವಾದರೆ ತೀವ್ರ ಶಸ್ತ್ರಚಿಕಿತ್ಸೆಯನ್ನೂ ಧೈರ್ಯವಾಗಿ ಸಹಿಸುವನು. ಇತರರನ್ನು ನೀವು ಅಳೆಯುವಾಗ ಧೈರ್ಯ, ಮಹಾತ್ಮ್ಯೆ ಎಂಬುದಕ್ಕೆ ನೀವು ಕೊಡುವ ಅರ್ಥವೇನು ಎಂಬುದನ್ನು ಮೊದಲು ಹೇಳಬೇಕು.

ಸ್ತ್ರೀ ಪುರುಷನಷ್ಟೇ ಧೈರ್ಯಶಾಲಿ. ಪ್ರತಿಯೊಬ್ಬರೂ ತಮ್ಮ ತಮ್ಮ ರೀತಿಯಲ್ಲಿ ಧೈರ್ಯಶಾಲಿಗಳು. ಹೆಂಗಸಿನಷ್ಟೆ ತಾಳ್ಮೆ, ಸಹಿಷ್ಣುತೆ, ಪ್ರೀತಿಗಳಿಂದ ಯಾವ ಗಂಡಸು ಒಂದು ಶಿಶುವನ್ನು ಪೋಷಿಸಬಲ್ಲ? ಒಬ್ಬರು ಕಾರ್ಯ ಮಾಡುವ ಧೈರ್ಯ ಪಡೆದಿದ್ದರೆ, ಮತ್ತೊಬ್ಬರು ಕಷ್ಟವನ್ನು ಸಹಿಸುವ ಧೈರ್ಯ ಪಡೆದಿದ್ದಾರೆ. ಸ್ತ್ರೀಗೆ ಸಾಹಸ ಮಾಡುವುದಕ್ಕೆ ಆಗದಿದ್ದರೆ, ಪುರುಷನಿಗೆ ಸ್ತ್ರೀಯಷ್ಟು ಕಷ್ಟವನ್ನು ಸಹಿಸುವುದಕ್ಕೂ ಆಗುವುದಿಲ್ಲ. ವಿಶ್ವದಲ್ಲಿ ನಾವು ಒಂದು ಅದ್ಭುತ ಸಮತೋಲನವನ್ನು ನೋಡುವೆವು.

ಎರಡು ಬಗೆಯ ಧೈರ್ಯಗಳಿವೆ. ಒಂದು ಫಿರಂಗಿಯನ್ನು ಎದುರಿಸುವ ಧೈರ್ಯ. ಎರಡನೆಯದು ಆಧ್ಯಾತ್ಮಿಕ ಶ್ರದ್ಧೆಯಿಂದ ಬಾಳುವುದು. ಭಾರತದೇಶಕ್ಕೆ ದಂಡೆತ್ತಿ ಬಂದ ಒಬ್ಬ ಚಕ್ರವರ್ತಿಗೆ ಅವನ ಗುರು ಕೆಲವು ಮಹಾತ್ಮರನ್ನು ಸಂದರ್ಶಿಸು ಎಂದು ಹೇಳಿದ್ದನು. ಬಹಳ ಹುಡುಕಾಡಿದ ಮೇಲೆ ಒಂದು ಬಂಡೆಯ ಮೇಲೆ ವೃದ್ಧನೊಬ್ಬನು ಕುಳಿತಿರುವುದನ್ನು ಆ ಚಕ್ರವರ್ತಿಯು ಕಂಡನು. ಚಕ್ರವರ್ತಿ ಅವನೊಂದಿಗೆ ಸ್ವಲ್ಪ ಹೊತ್ತು ಮಾತನಾಡಿ ಅವನ ಜ್ಞಾನವನ್ನು ಬಹಳವಾಗಿ ಮೆಚ್ಚಿದನು. ತನ್ನ ಜೊತೆ ತನ್ನ ದೇಶಕ್ಕೆ ಬರುವಂತೆ ಋಷಿಯನ್ನು ಕೇಳಿಕೊಂಡನು. ಋಷಿಯು, "ಇಲ್ಲ, ಈ ಕಾಡಿನಲ್ಲೇ ನಾನು ತೃಪ್ತನಾಗಿರುವೆ" ಎಂದನು. ಚಕ್ರವರ್ತಿ, "ನಾನು ನಿನಗೆ ದ್ರವ್ಯ, ಐಶ್ವರ್ಯ, ಅಧಿಕಾರ ಇವನ್ನು ಕೊಡುವೆ. ನಾನು ಪ್ರಪಂಚದ ಚಕ್ರವರ್ತಿ" ಎಂದನು. ಋಷಿ, "ಇಲ್ಲ, ಅವಾವುವೂ ನನಗೆ ಬೇಕಿಲ್ಲ" ಎಂದನು. ಚಕ್ರವರ್ತಿಯು, "ನೀನು ಬರದಿದ್ದರೆ ಕೊಲ್ಲುವೆನು" ಎಂದನು. ಋಷಿಯು ಶಾಂತಮನಸ್ಕನಾಗಿ ಮಂದಹಾಸದಿಂದ, "ಚಕ್ರವರ್ತಿ, ನೀನು ಇಂಥ ಅವಿವೇಕದ ಮಾತನ್ನು ಎಂದೂ ಆಡಿಲ್ಲ. ನೀನು ನನ್ನನ್ನು ಕೊಲ್ಲಲಾರೆ. ನನ್ನನ್ನು ಬಿಸಿಲು ಒಣಗಿಸದು, ಬೆಂಕಿ ದಹಿಸದು, ಕತ್ತಿ ಛೇದಿಸದು. ನಾನು ಜನನ-ಮರಣಾತೀತ. ನಿತ್ಯವಾದ ಸರ್ವವ್ಯಾಪಿಯಾದ ಸರ್ವಶಕ್ತಿಸ್ವರೂಪನಾದ ಆತ್ಮನೇ ನಾನು" ಎಂದು ಹೇಳಿದನು. ಇದು ಆಧ್ಯಾತ್ಮಿಕ ಧೈರ್ಯ. ಮೊದಲನೆಯದು ಸಿಂಹದ ಅಥವಾ ಹುಲಿಯ ಧೈರ್ಯ.

ಅಂಜಬೇಡಿ, ಮಾನವ ಇತಿಹಾಸದಲ್ಲೆಲ್ಲಾ ಮಹಾಶಕ್ತಿ ಇದ್ದುದು ಜನಸಾಮಾನ್ಯರಲ್ಲಿ. ಅವರಲ್ಲಿಯೇ ಜಗದ ಮಹಾ ವಿಭೂತಿಗಳೆಲ್ಲ ಜನಿಸಿರುವರು. ಚರಿತ್ರೆ ಪುನರಾವರ್ತನೆ ಆಗಲೇಬೇಕು. ಯಾವುದಕ್ಕೂ ಅಂಜಬೇಡಿ. ಅದ್ಭುತ ಕಾರ್ಯಗಳನ್ನು ನೀವು ಸಾಧಿಸುತ್ತೀರಿ. ಅಂಜಿದೊಡನೆಯೇ ನೀವು ಕೆಲಸಕ್ಕೆ ಬಾರದವರಾಗುತ್ತೀರಿ. ಪ್ರಪಂಚದ ದುಃಖಕ್ಕೆ ಮುಖ್ಯ ಕಾರಣ ಅಂಜಿಕೆ. ಇದೇ ಎಲ್ಲಕ್ಕಿಂತ ದೊಡ್ಡ ಮೂಢನಂಬಿಕೆ. ನಿಮ್ಮ ಕಷ್ಟಕ್ಕೆಲ್ಲಾ ಕಾರಣ ಅಂಜಿಕೆ. ನಿರ್ಭಯತೆ ಈ ಕ್ಷಣವೇ ಸ್ವರ್ಗವನ್ನು ಕೂಡ ಕೊಡುವುದು.

ನಿಮ್ಮ ಹೃದಯದಲ್ಲಿ ಜಗನ್ಮಾತೆ ಶಕ್ತಿಯಂತೆ ನೆಲೆಸಲಿ. ಜಗನ್ಮಾತೆ ನಿಮ್ಮೆಲ್ಲರನ್ನೂ ನಿರ್ಭೀತರನ್ನಾಗಿ ಮಾಡಲಿ. ನಾನು ಇದನ್ನು ಜೀವನದಲ್ಲಿ ನೋಡಿದ್ದೇನೆ ಯಾರು ತನ್ನ ವಿಷಯದಲ್ಲಿ ಅತಿ ಎಚ್ಚರಿಕೆಯಿಂದ ನಡೆಯುವನೋ ಅವನು ಹೆಜ್ಜೆಹೆಜ್ಜೆಗೂ ಅಪಾಯದಲ್ಲಿ ಸಿಕ್ಕಿ ಬೀಳುವರು. ಯಾರು ಗೌರವ ಖ್ಯಾತಿ ಎಲ್ಲಿ ಹೋಗುವುದೋ ಎಂದು ಹೆದರುವರೋ ಅವರು ಕೇವಲ ಅವಮಾನವನ್ನೇ ಹೊಂದುವರು. ಯಾರು ಯಾವಾಗಲೂ ನಷ್ಟಕ್ಕೆ ಹೆದರುವರೋ ಅವರು ಯಾವಾಗಲೂ ನಷ್ಟವನ್ನೇ ಹೊಂದುವರು.

ಅಸಾಧಾರಣವಾದ ಶಕ್ತಿಯಿಂದ ಕಾರ್ಯೋನ್ಮುಖರಾಗಿ! ಏನು ಅಂಜಿಕೆ! ನಿಮಗೆ ಅಡ್ಡಿ ತರುವುದಕ್ಕೆ ಯಾರಿಗೆ ಶಕ್ತಿಯಿದೆ? ನಕ್ಷತ್ರಗಳನ್ನು ಕೂಡ ಧೂಳೀಪಟ ಮಾಡುವೆವು; ಜಗತ್ತಿನ ಕಟ್ಟನ್ನು ಕೂಡ ಸಡಿಲಿಸುವೆವು. ನಾವು ಯಾರೆಂಬುದು ನಿಮಗೆ ಗೊತ್ತಿಲ್ಲವೇ? ಶ್ರೀರಾಮಕೃಷ್ಣರ ದಾಸರು ನಾವು. ಅಂಜಿಕೆ! ಯಾರಿಗೆ ಅಂಜಿಕೆ! ಖಂಡಿತ ಯಾರಿಗೂ ಇಲ್ಲ!

ಸತ್ಯವನ್ನು ನಂಬಿ, ಧೈರ್ಯವಾಗಿ ಅದನ್ನು ಅನುಷ್ಠಾನಕ್ಕೆ ತನ್ನಿ. ಪ್ರಪಂಚಕ್ಕೆ ಇಂತಹ ಧೈರ್ಯವುಳ್ಳ ಸ್ತ್ರೀ-ಪುರುಷರು ಬೇಕಾಗಿದ್ದಾರೆ. ಸತ್ಯವನ್ನು ತಿಳಿಯಬಲ್ಲ, ಅದನ್ನು ಜೀವನದಲ್ಲಿ ತೋರಬಲ್ಲ, ಮರಣಕ್ಕೆ ಅಂಜದ, ಅಲ್ಲ, ಅದನ್ನು ಸ್ವಾಗತಿಸುವ, ಮನುಷ್ಯನಿಗೆ ಆತ್ಮದ ಅರಿವನ್ನುಂಟುಮಾಡುವ, ಪ್ರಪಂಚದಲ್ಲಿ ಯಾವುದೂ ನಮ್ಮನ್ನು ನಾಶ ಮಾಡಲಾರದು ಎಂಬ ವಿಶ್ವಾಸವನ್ನು ನೀಡುವ ಧೈರ್ಯವನ್ನು ಅನುಷ್ಠಾನಕ್ಕೆ ತನ್ನಿ. ಆಗ ನೀವು ಸ್ವತಂತ್ರರಾಗುವಿರಿ.

★